



ಚಕ್ರವು ಕಂಡಿದ್ದು.

ಆಶ್ಚರ್ಯವೆನಿಸಬಹುದು; ಬೌದ್ಧಧರ್ಮದಲ್ಲಿ ಸಿಂಹವು ಬುದ್ಧನನ್ನು ಪ್ರತಿನಿಧಿಸುತ್ತದೆ. ಶಿವಾಲಯಗಳಲ್ಲಿ ನಂದಿಯ ವಿಗ್ರಹಗಳಂತೆ ಅನೇಕ ಬುದ್ಧ ದೇವಾಲಯಗಳಲ್ಲಿ ಸಿಂಹಗಳ ಪ್ರತಿಮೆ/ಪಟಗಳನ್ನು ನಾನು ನೋಡಿದ್ದೇನೆ. ಭಾರತದಲ್ಲಷ್ಟೇ ಅಲ್ಲ, ಥಾಯ್ಲೆಂಡಿನಂತಹ ಪ್ರಮುಖ ಬೌದ್ಧ ದೇಶಗಳಲ್ಲಿ ಕೂಡ. ಬುದ್ಧನೂ ಸಿಂಹದಂತೆ ಯಾವುದಕ್ಕೂ ಅಂಜದವನು, ಸಕಲ ಶಕ್ತಿಗಳನ್ನು ತನ್ನೊಳಗೇ ಅಡಗಿಸಿಕೊಂಡವನು ಮತ್ತು ಗಾಂಭೀರ್ಯವನ್ನಷ್ಟೇ ಹೊರಚೆಲ್ಲುವವನು ಎನ್ನುವ ಕಾರಣಗಳನ್ನು ಧರ್ಮಗ್ರಂಥಗಳು ನೀಡುತ್ತವೆ. ಅಶೋಕನ ಲಾಂಛನದಲ್ಲಿ ನಾಲ್ಕೂ ದಿಕ್ಕುಗಳನ್ನು ನಿಟ್ಟಿಸುವ ಗಂಭೀರ ಭಂಗಿಯ ನಾಲ್ಕು ಸಿಂಹಗಳು ಬುದ್ಧನ ನಾಲ್ಕು ಪರಿಮಾಣಗಳು. ಈ ಸಿಂಹಗಳು ಹೆದರುವವಲ್ಲ, ಹೆದರಿಸುವವಲ್ಲ. ಬರಿಯೇ, ಕ್ರೌರ್ಯವಿಲ್ಲದ ಶಕ್ತಿಯ ಪ್ರದರ್ಶನ. ಶಾಕ್ಯವಂಶದ ಕ್ಷತ್ರಿಯ ರಾಜಕುಮಾರ ಸಿದ್ಧಾರ್ಥನು ಜ್ಞಾನಿಯಾಗಿ, ಶಾಕ್ಯಮುನಿಯಾಗಿ, ತನ್ನನ್ನು ತಾನೇ ಕಂಡುಕೊಂಡು ಬುದ್ಧನಾಗಿ ಸ್ಥಿತ್ಯಂತರಗೊಂಡದ್ದಕ್ಕೆ ಪ್ರತಿಮಾರ್ಥಗಳನ್ನು ಹೊತ್ತಂತೆ. ಸಿಂಹದ ಚರ್ಮದೊಳಗೆ ಹಸುವೊಂದು ಹೊಕ್ಕಂತೆ. ಜೈನರ ಕತೆಯಲ್ಲಿ, ನೆಲದಾಸೆಯಿಂದ ಯುದ್ಧಕ್ಕೆ ಬಂದು ಸೋತ ಅಣ್ಣನನ್ನು ಅಪ್ಪಳಿಸಿ ಕೊಲ್ಲುತ್ತೇನೆ ಎಂದು ಎತ್ತಿಹಿಡಿದ ಬಾಹುಬಲಿ ಆಕ್ಷಣದಲ್ಲಿ ವೈರಾಗ್ಯವನ್ನು ಹೊಂದಿ ಎಲ್ಲವನ್ನೂ ತ್ಯಜಿಸಿ ನಡೆದಂತೆ. ಜೈನರ ಜೀವನ ತತ್ತ್ವಗಳು ಬೌದ್ಧರಿಗಿಂತ ಬಹಳ ಬೇರೆಯಾಗುವುದಿಲ್ಲ. ಅಣ್ಣನನ್ನು ಎತ್ತಿದ ಆ ಕ್ಷಣದಲ್ಲಿ ಬಾಹುಬಲಿಯ ಧರ್ಮಚಕ್ರವು ಚಲಿಸಿಬಿಟ್ಟಿತು; ಆವರೆಗೂ ನಂಬಿದ್ದರ ಎದುರುಬದಿಯ ಮೇಲೆ ಗಡಿಯಾರದ ಮುಳ್ಳು ಹೊರಳಿತು. ಹೊಸ ಜನ್ಮವೊಂದು ಪ್ರಾಪ್ತವಾದಂತೆ ಎಲ್ಲವನ್ನೂ ತ್ಯಜಿಸಿ ನಡೆದುಬಿಟ್ಟ ಯುದ್ಧವನ್ನು ಗೆದ್ದ ವೀರ. ಕಳಿಂಗ ಯುದ್ಧದಲ್ಲಿ ಚಕ್ರವರ್ತಿ ಅಶೋಕನಿಗಾದದ್ದೂ ಇದೇ. ಮಹಾಭಾರತದಲ್ಲಿ ಕುರುಕ್ಷೇತ್ರ ಯುದ್ಧವು ಪ್ರಾರಂಭವಾಗುವ ಮುನ್ನ ಅರ್ಜುನನಿಗೆ ಅನ್ನಿಸಿದ್ದೂ ಇದೇ. ಧರ್ಮಚಕ್ರದ ಮುಳ್ಳು ಸರಿ ಸಮಯಕ್ಕೆ ಹಿಂಸೆಯಿಂದ ಅಹಿಂಸೆಗೆ ಚಲಿಸಿದ್ದನ್ನು ಗುರುತಿಸುವ ಸೂಕ್ಷ್ಮವನ್ನು ಈ ಮಣ್ಣು ಯಾವತ್ತಿಗೂ ನಮಗೆ ನೀಡಿದೆ.

ಬೌದ್ಧಧರ್ಮದಲ್ಲಿ ಕರ್ಮವೆನ್ನುವುದು ಮನಸ್ಸಿನ ಒಂದು ಸ್ಥಿತಿಯಷ್ಟೆ. ಸುಖ ಮತ್ತು ದುಃಖಗಳು ನಮ್ಮೊಳಗೇ ಇರುತ್ತವೆ, ನಾವು ಯಾವುದನ್ನು ಯೋಚಿಸುತ್ತೇವೆಯೋ ಅದೇ ಆಗಿಬಿಡುತ್ತೇವೆ ಎನ್ನುತ್ತಾನೆ ಬುದ್ಧ. ಜೀವಯಾನದ ಎಸ್. ಮಂಜುನಾಥರ ಒಂದು ಪದ್ಯದಲ್ಲಿ ಒಬ್ಬ ಪುಟಾಣಿ ಹುಡುಗ ಪನ್ನೇರಲ ಹಣ್ಣನ್ನು ಬಹಳ ಬಯಸಿ ಕೊನೆಗೆ ತಾನೇ ಅದಾಗಿ ರೂಪಾಂತರಗೊಳ್ಳುತ್ತಾನೆ. ಹೊರಗಿನ ಯಾವ ವಸ್ತುವೂ ನಮ್ಮೊಳಗಿನ ಉನ್ಮಾದ ಮತ್ತು ಕ್ಲೇಷಗಳಿಗೆ ಕಾರಣವಾಗುವುದಿಲ್ಲ. ಮನಸ್ಸು ತಾನು ಬಯಸಿದ್ದಕ್ಕೆ ತಕ್ಕಂತೆ ವರ್ತಿಸುತ್ತದೆ. ತನ್ನೊಳಗಿನ ಶಾಂತಿಯನ್ನು ಅರಸುವ ಒಳನೋಟಗಳು ಮತ್ತು ಸೂಕ್ಷ್ಮ ಗ್ರಹಣ ಶಕ್ತಿಗಳನ್ನು ದಕ್ಕಿಸಿಕೊಂಡ ಮೇಲೆ ಸಿದ್ಧಾರ್ಥ ಬುದ್ಧನಾಗಿ ರೂಪಾಂತರಗೊಂಡ. ಶಾಂತಿಯನ್ನು ಅರಸಿ ಕೊನೆಗೆ ತಾನೇ ಶಾಂತಿಯ ಸ್ವರೂಪನಾದ. ಹೊರಗಿನದೇನೂ ಅವನಿಗೆ ಬೇಡವಾದವು. ಎಲ್ಲವೂ ಕ್ಷಣಿಕವಾಗಿ ಕಂಡವು. ಬದುಕೆನ್ನುವ ಅತಿ ಕ್ಷಣಿಕ ಗಾಳಿಗುಳ್ಳೆಯಲ್ಲಿ, ತಾನು ಬೋಧಿಸಿದ್ದನ್ನು ಬರೆದಿಡುವ ಅವಶ್ಯವೂ ಅವನಿಗೆ ಕಾಣಲಿಲ್ಲ. ಅವನ ಪರಿನಿರ್ವಾಣದ ನಂತರ ಅವನ ಶಿಷ್ಯರು ಬರೆದಿಟ್ಟದ್ದಷ್ಟೇ, ಅವರ ಗ್ರಹಿಕೆಗೆ ದಕ್ಕಿದ್ದಷ್ಟೇ, ಅವನದಾಗಿ ನಮಗೆ ಉಳಿದಿರುವುದು.

ಬರವಣಿಗೆಯ ಸಮಸ್ಯೆಯೆಂದರೆ ಚಿಂತನೆಗೆ ಒಂದು ಪರಿಮಾಣವನ್ನು ಕೊಟ್ಟುಬಿಡುವುದು. ಮೂಲಕ್ಕೆ ಅದು ಒಂದು ಸಮಸ್ಯೆ ಎಂದಲ್ಲ, ಚಿಂತನೆಗೆ ಒಂದು ಪರಿಮಾಣವನ್ನು ಕೊಡುವುದು ಲಿಖಿತ ಭಾಷೆಯ ದ್ರವ್ಯಧರ್ಮ. ಪ್ರಪಂಚದ ಪ್ರಮುಖ ಭಾಷೆಗಳಲ್ಲಿ ಲೇಖನ ಸಂಸ್ಕೃತಿ ಹುಟ್ಟಿದ್ದೇ ಆ ಕಾರಣಕ್ಕೆ, ಚಿಂತನೆಗಳನ್ನು ದಾಟಿಸುವುದಕ್ಕೆ. ಭಾಷೆಯ ಈ ಗುಣವು ಮಿತಿಯಾಗಿ ಎದ್ದು ಕಾಣುವುದು ಬುದ್ಧ, ಮಹಾವೀರ, ಮತ್ತು ಶಂಕರರಂಥವರನ್ನು ಹಿಡಿಯಲು ಹೊರಟಾಗ. ನಮ್ಮ ಗ್ರಹಿಕೆಯ ಬುದ್ಧ ಮತ್ತು ನಿಜವಾದ ಬುದ್ಧ ಸಂಪೂರ್ಣವಾಗಿಯೇ ಬೇರೆ ಇರಬಹುದು

**ಧರ್ಮಚಕ್ರದ ಮುಳ್ಳು ಸರಿ ಸಮಯಕ್ಕೆ ಹಿಂಸೆಯಿಂದ ಅಹಿಂಸೆಗೆ ಚಲಿಸಿದ್ದನ್ನು ಗುರುತಿಸುವ ಸೂಕ್ಷ್ಮವನ್ನು ಈ ಮಣ್ಣು ಯಾವತ್ತಿಗೂ ನಮಗೆ ನೀಡಿದೆ.**

ಎನ್ನಿಸಿದಾಗ. ತರ್ಕ ಚಿಂತನೆಗಳನ್ನು ನಿಯಂತ್ರಿಸುವ ನಮ್ಮ ಎಡ ಮೆದುಳಿನಲ್ಲೇ ಹೆಚ್ಚು ಬಾಳುವ ಭಾಷೆಯ ಪ್ರಭುತ್ವವಿರುವುದು ಪ್ರಕೃತಿಯನ್ನು ವಾಕ್ಸರಣಿಯ ತರ್ಕಗಳಲ್ಲಿ ಮತ್ತು ಗಣಿತಸೂತ್ರಗಳಲ್ಲಿ ಹಿಡಿದಿಡುವುದರಲ್ಲಿ ಮತ್ತು ಹಿಡಿದಿಟ್ಟಿದ್ದನ್ನು ದಿನದ ಬದುಕಿಗೆ ಹೇಗೆ ಅಳವಡಿಸಿಕೊಳ್ಳಬಹುದು ಎನ್ನುವ ಎಂಜಿನಿಯರಿಂಗ್‌ನಲ್ಲಿ. ಭಾಷೆಯ ಈ ಜಾಲದಲ್ಲಿ ಸಿಕ್ಕಿಹೋಗುವ ಅಪಾಯಕ್ಕೋ ಏನೋ, ಬದುಕನ್ನು ತರ್ಕಸೂತ್ರಗಳ ಆಧಾರದ ಮೇಲೆ ನೋಡುವಂತಹ ಪ್ರಶ್ನೆಗಳು ಎದುರಾದರೆ ಬುದ್ಧ ಉತ್ತರಿಸುತ್ತಿರಲಿಲ್ಲವಂತೆ. ಮೌನವೇ ಅವನ ಉತ್ತರವಾಗಿರುತ್ತಿತ್ತಂತೆ. ಅಂತಹ ಪ್ರಶ್ನೆಗಳಿಗೆ ಮೌನವಾಗಿರುವಂತೆ ಶಿಷ್ಯರಿಗೂ ಸೂಚಿಸಿದ್ದನಂತೆ. ಭಾಷೆಯ ಈ ಹುಟ್ಟುಮಿತಿಯೇ ಕೊನೆಗೆ ಭಾಷೆಯನ್ನೇ ನಂಬಿದ ಕವಿ, ಲೇಖಕರನ್ನೂ ನಿರಾಸೆಗೊಳಿಸುತ್ತದೇನೋ. ನಾನು ಹೇಳುವುದನ್ನೆಲ್ಲಾ ಹೇಳಿಯಾಯಿತು ಎಂದು ನಿರಾಳವಾಗಿ ಸಾಯುವ ಭಾಗ್ಯ ಬರಹಗಾರರಲ್ಲದ್ದು ಎನಿಸುತ್ತದೆ.

ಸಾಯುವ ಹೊತ್ತಿನಲ್ಲಿ ಕಾಫ್ಕಾ ತನ್ನೆಲ್ಲ